**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**
**ದಿಃ 30.07.2024**

**ಮುಂದುವರಿದ ಪಾಟೀ ಸವಾಲುಃ ಶ್ರೀ ಹೆಚ್ ಸಿ ಎಂಕೆ ವಕೀಲರಿಂದ**

**2** ನೇ ಪ್ರತಿವಾದಿ ಚಿಕ್ಕತ್ತೂರಿನಲ್ಲಿ ವಾಸವಿದ್ದಾರೆ ಎಂದರೆ ಸರಿ . **2** ನೇ ಪ್ರತಿವಾದಿಯ ಹೆಸರಿನಲ್ಲಿ ಹಿಟ್ಟಿನ ಗಿರಣಿ ಮತ್ತು ದಿನಸಿ ಅಂಗಡಿ ಮಾಡಲು ಪಂಚಾಯತಿಯಿಂದ ಪರವಾನಿಗೆ ಪಡೆದಿದ್ದರು ಎಂದರೆ ಸರಿ . ಸದರಿ ಗಿರಣಿ ಹಾಗೂ ದಿನಸಿ ಅಂಗಡಿಯನ್ನು **2** ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. **2** ನೇ ಪ್ರತಿವಾದಿ ಸದರಿ ವ್ಯಾಪಾರವನ್ನು **1973** ರಿಂದಲೇ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಗಳ ಸ್ವತ್ತುಗಳ ಪೈಕಿ **2** ನೇ ಪ್ರತಿವಾದಿಯ ಹೆಸರಿನಲ್ಲಿ ಪಡೆದಿರುವ ಸ್ವತ್ತುಗಳನ್ನು ಸ್ವಯಂ ದುಡಿಮೆಯಿಂದ ಪಡೆಯಲಾಗಿದೆ ಎಂದರೆ ಸರಿಯಲ್ಲ.

ದಿ **18-01-1973** ರಲ್ಲಿ **1** ನೇ ಪ್ರತಿವಾದಿಗೆ ಪಶು ಸಂಗೋಪನೆ ಇಲಾಖೆಯಲ್ಲಿ ನೌಕರಿ ದೊರೆತಿದೆ ಎಂದರೆ ನನಗೆ ಗೊತ್ತಿಲ್ಲ. **1** ನೇ ಪ್ರತಿವಾದಿ ದಿ **30-11-2004** ರವರೆಗೆ ಕೂಡಿಗೆ ಡೈರಿಯಲ್ಲಿ ಪ್ಲಾಂಟ್ ಅಪರೇಟರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಿ **18-01-1973** ರಂದ **1** ನೇ ಪ್ರತಿವಾದಿ ಲಕ್ಕೆಕುಪ್ಪೆ ಗ್ರಾಮಕ್ಕೆ ತೆರಳಿ ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಗೆ ಸ್ವಯಂ ನಿವೃತಿಯ ಅಡಿಯಲ್ಲಿ ರೂ **5** ಲಕ್ಷ ಹಣ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. **1** ನೇ ಪ್ರತಿವಾದಿಯ ತಂದೆಯ ಹೆಸರು ಹೊನ್ನೆಗೌಡ . ಅವರಿಗೆ ಮರಿಗೌಡ ಎಂಬ ಮತ್ತೊಂದು ಹೆಸರು ಇತ್ತು ಎಂದರೆ ನನಗೆ ಗೊತ್ತಿಲ್ಲ. ಮರಿಗೌಡ ಅಲಿಯಾಸ್ ಹೊನ್ನೆ ಗೌಡರವರಿಗೆ ಲಕ್ಕಿಕುಪ್ಪೆ ಗ್ರಾಮದಿಂದ ಪಿತ್ರಾರ್ಜಿತವಾಗಿ ಯಾವುದೇ ಸ್ವತ್ತು ಬಂದಿಲ್ಲ ಎಂದರೆ ಸರಿಯಲ್ಲ. ಹೊನ್ನೆ ಗೌಡರವರಿಗೆ ಪಿತ್ರಾರ್ಜಿತವಾಗಿ

ಬಂದಂತಹ ಸ್ವತ್ತುಗಳ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅವು ಯಾವುದು ಎಂದು ಹೇಳಲು ಬರುವುದಿಲ್ಲ. ಆ ರೀತಿ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**1** ನೇ ಪ್ರತಿವಾದಿ ತಮ್ಮ ಹೆಸರಿನಲ್ಲಿ ಖರೀದಿಸಿರುವ ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. **3**ನೇ ಪ್ರತಿವಾದಿ ವ್ಯವಸಾಯ ಮಾಡುತ್ತಾರೆ . **3** ನೇ ಪ್ರತಿವಾದಿ ಕೂಡಿಗೆಯಲ್ಲಿ ಬೇರೆಯವರ ಜಮೀನನ್ನು ಬೋಗ್ಯಕ್ಕೆ ಪಡೆದು ವ್ಯವಸಾಯ ಮಾಡುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ **3** ರಿಂದ **7** ರ ಸ್ವತ್ತು **3** ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

ಪ್ರತಿವಾದಿ **4** ಮತ್ತು **5** ರವರು ಮದುವೆಯಾಗಿ ಅವರ ಗಂಡಂದಿರ ಜೊತೆ ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿ . ಪ್ರತಿವಾದಿ **4** ಮತ್ತು **5** ರವರು ತಮ್ಮ ಗಂಡನ ಕಡೆಯಿಂದ ಬಂದಂತಹ ಸಂಪಾದನೆಯಿಂದ ಸ್ವತ್ತುಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತುಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಆದ ಕಾರಣ ದಾವಾ ಸ್ವತ್ತುಗಳಲ್ಲಿ ವಾದಿಗಳಿಗೆ ಯಾವುದೇ ಭಾಗಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಆದ ಕಾರಣ ಈ ಪ್ರಕರಣದಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಪಾಟಿ ಸವಾಲುಃ ಶ್ರೀ ಕೆ ಸಿ ಎಸ್ ವಕೀಲರಿಂದ ಪ್ರತಿವಾದಿ **1** , **2** , **4** ಮತ್ತು **5** ರವರ ಪರ ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ .

ಮುಂದುವರಿದ ಪಾಟಿ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರ ದ ನ್ಯಾ ದಂ, ಕುಶಾಲನಗರ